**ಓ ಎಸ್ ನಂಃ 60-15**
**ಪಿ ಡಬ್ಲ್ಯೂ ಃ 1**

**ದಿಃ 09-02-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಆರ್ ಎಸ್ ವಕೀಲರಿಂದ**

15. ನನ್ನ ಕುಟುಂಬದ ಮೂಲ ಕತೃ ಕೆಂಪಯ್ಯ ಎಂದರೆ ನಿಜ. ಕೆಂಪಯ್ಯರವರಿಗೆ ಕೆಂಪನರಸಯ್ಯ ಎಂಬ ಒಬ್ಬನೇ ಮಗ ಎಂದರೆ ನಿಜ. ಕೆಂಪನರಸಯ್ಯರವರಿಗೆ ಇಬ್ಬರು ಹೆಂಡತಿಯರು ಆ ಇಬ್ಬರು ಹೆಂಡತಿಯರ ಹೆಸರು ಹುಚ್ಚಮ್ಮ ಎಂದರೆ ನಿಜ. ಮೊದಲನೆ ಹೆಂಡತಿ ಹುಚ್ಚಮ್ಮರವರಿಗೆ ಗಂಗಣ್ಣ ಮತ್ತು ಕೆಂಪಣ್ಣ ಎಂಬ ಮಕ್ಕಳು ಎಂದರೆ ನಿಜ. ಸದರಿ ಗಂಗಣ್ಣ ಮತ್ತು ಕೆಂಪಣ್ಣ ಈ ದಾವೆಯಲ್ಲಿ 5 ಮತ್ತು 8 ನೇ ಪ್ರತಿವಾದಿಗಳು ಎಂದರೆ ನಿಜ. ಇವರಿಬ್ಬರು ಈಗ ತೀರಿಕೊಂಡಿದ್ದು ಇವರ ವಾರಸುದಾರರು ಪಕ್ಷಗಾರರಾಗಿರುತ್ತಾರೆ ಎಂದರೆ ನಿಜ.

16. ಎರಡನೇ ಹೆಂಡತಿ ಹುಚ್ಚಮ್ಮನವರಿಗೆ ನಾಲ್ಕು ಜನ ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣು ಮಗಳು ಎಂದರೆ ನಿಜ. ಗಂಡು ಮಕ್ಕಳ ಹೆಸರು ದೊಡ್ಡಚನ್ನಯ್ಯ, ಶಿವರಾಮ, ಚಿಕ್ಕಚನ್ನೆಗೌಡ ಮತ್ತು ಮಾರಣ್ಣ ಎಂದರೆ ನಿಜ. ಚಿಕ್ಕಚನ್ನೇಗೌಡ ಎಂದರೆ ನಾನೇ ಆಗಿರುತ್ತೇನೆ. ಉಳಿದವರು ಪ್ರತಿವಾದಿಗಳು ಎಂದರೆ ನಿಜ. 9 ನೇ ಪ್ರತಿವಾದಿ ಈ ದಾವೆಯ ಮೊದಲನೇ ಪ್ರತಿವಾದಿಯ ಹೆಂಡತಿ ಎಂದರೆ ನಿಜ. 1 ಮತ್ತು 9 ನೇ ಪ್ರತಿವಾದಿಗಳ ಮದುವೆ 40 ವರ್ಷಗಳ ಹಿಂದೆ ಆಗಿರುತ್ತದೆ ಎಂದರೆ ನಿಜ. 9 ನೇ ಪ್ರತಿವಾದಿ ತಮ್ಮ ಮನೆಯಲ್ಲಿ ಹಸುಗಳನ್ನು ಸಾಕಿ ಹಾಲನ್ನು ಮಾರಾಟ ಮಾಡುತ್ತಾರೆ ಎಂದರೆ ನಿಜ. ಅದೇ ರೀತಿ 9 ನೇ ಪ್ರತಿವಾದಿ ವ್ಯವಸಾಯ ಮತ್ತು ಕೂಲಿ ಕೆಲಸ ಮಾಡುತ್ತಾರೆ ಎಂದರೆ ನಿಜ.

17. ಬಿ ಷೆಡ್ಯೂಲ್ ಆಸ್ತಿಯ ಖಾತೆ ಮತ್ತು ಪಹಣಿ ನನ್ನ ತಂದೆಯಾದ ಕೆಂಪನರಸಯ್ಯರವರ ಹೆಸರಿನಲ್ಲಿ ಇರುತ್ತದೆ. ಈ ಆಸ್ತಿಯಲ್ಲಿ ನನ್ನ ತಂದೆ ದಿನಾಂಕಃ 20-04-1942 ರಂದು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಆಸ್ತಿ ನನ್ನ ಅಜ್ಜನ ಹೆಸರಿನಲ್ಲಿ ಇರುವ ಬಗ್ಗೆ ಖಾತೆ ಮತ್ತು ಪಹಣಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ಅಜ್ಜ ನಾನು ಹುಟ್ಟುವ ಮೊದಲೇ ತೀರಿಕೊಂಡಿರುತ್ತಾರೆ. ಈಗ ನನ್ನ ವಯಸ್ಸು 67 ವರ್ಷ ಆಗಿರುತ್ತದೆ. ಬಿ ಷೆಡ್ಯೂಲ್ ಆಸ್ತಿ ಕೆಂಪಯ್ಯರವರ ಹೆಸರಿನಲ್ಲಿರುವುದನ್ನು ನಾನು 2 ವರ್ಷಗಳ ಹಿಂದೆ ನೋಡಿರುತ್ತೇನೆ. ಬಿ ಷೆಡ್ಯೂಲ್ ಆಸ್ತಿಯನ್ನು ನನ್ನ ತಂದೆ ಖರೀದಿ ಮಾಡಿದ್ದು ಅದು ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ನಾನು 1945 ರಲ್ಲಿ ಜನಿಸಿರಬಹುದು. ನಾನು ಹುಟ್ಟುವ ಮೊದಲೇ ನನ್ನ ತಂದೆ ಬಿ ಷೆಡ್ಯೂಲ್ ಆಸ್ತಿಯನ್ನು ಖರೀದಿ ಮಾಡಿದ್ದರಿಂದ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಬಿ ಷೆಡ್ಯೂಲ್ ಆಸ್ತಿಯನ್ನು ಖರೀದಿ ಮಾಡುವಾಗ ನನ್ನ

ಅಣ್ಣ 1ನೇ ಪ್ರತಿವಾದಿ ಜನಿಸಿದ್ದರು. ಈ ಆಸ್ತಿಯನ್ನು ಖರೀದಿ ಮಾಡಿದ ಮೇಲೆ ಬಿ ಷೆಡ್ಯೂಲ್ ಆಸ್ತಿಯ ಖಾತೆ ಮತ್ತು ಪಹಣಿ ಕೆಂಪನರಸಯ್ಯರವರ ಹೆಸರಿಗೆ ಆಗಿರುತ್ತದೆ ಎಂದರೆ ನಿಜ.

18. ಬಿ ಷೆಡ್ಯೂಲ್ ಆಸ್ತಿಯನ್ನು ನನ್ನ ತಂದೆ ಕೆಂಪನರಸಯ್ಯರವರು 1ನೇ ಪ್ರತಿವಾದಿ ಮತ್ತು 4ನೇ ಪ್ರತಿವಾದಿಗಳ ಹೆಸರಿಗೆ ದಿನಾಂಕಃ 20-04-1982 ರಂದು ದಾನಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಈ ದಾವೆಯಲ್ಲಿ ಏನು ತಕರಾರು ಸಲ್ಲಿಸಿರುತ್ತಾರೆ ಗೊತ್ತಿಲ್ಲ. ಪ್ರತಿವಾದಿಗಳು ಏನು ತಕರಾರು ಸಲ್ಲಿಸಿರುತ್ತಾರೆ ಎಂಬುದನ್ನು ನಾನು ನಮ್ಮ ವಕೀಲರ ಕಡೆಯಿಂದ ತಿಳಿದುಕೊಂಡಿಲ್ಲ. ದಿನಾಂಕಃ 20-04-1982 ರಂದು 1 ಮತ್ತು 4ನೇ ಪ್ರತಿವಾದಿಗಳ ಹೆಸರಿಗೆ ದಾನಪತ್ರ ಆಗಿದೆ ಎಂದು ನಾನು ಈ ದಾವೆ ಹೂಡಿರುತ್ತೇನೆ. ಈ ದಾವೆ ಹೂಡುವ ಮೊದಲು ನನಗೆ ದಾನಪತ್ರ ಆಗಿರುವ ವಿಷಯ ಗೊತ್ತಾಗಿರುತ್ತದೆ. ದಾನ ಪತ್ರ ಆಗಿರುವುದನ್ನು ರದ್ದು ಪಡಿಸಬೇಕೆಂದು ನಾನು ನಮ್ಮ ವಕೀಲರಿಗೆ ಹೇಳಿರುತ್ತೇನೆ. ನಾನು 1 ಮತ್ತು 4ನೇ ಪ್ರತಿವಾದಿಗಳ ಹೆಸರಿಗೆ ಆದ ದಾನಪತ್ರವನ್ನು ನೋಡಿರುತ್ತೇನೆ. ಆ ದಾನಪತ್ರವನ್ನು ಈ ದಾವೆ ಹೂಡುವ ಮೊದಲೇ ಪಡೆದು ನೋಡಿರುತ್ತೇನೆ. ಬಿ ಷೆಡ್ಯೂಲ್ ಕೆಂಪನರಸಯ್ಯರವರ ಸ್ವಯಾರ್ಜಿತ ಆಸ್ತಿಯಾಗಿದ್ದು ಅವರು 1 ಮತ್ತು 4ನೇ ಪ್ರತಿವಾದಿಗಳ ಪರವಾಗಿ ದಾನಪತ್ರವನ್ನು ಆ ಆಸ್ತಿಗೆ ಸಂಬಂದಿಸಿದಂತೆ ಬರೆದುಕೊಟ್ಟಿರುತ್ತಾರೆ ಮತ್ತು ಆ ದಾನಪತ್ರ ಸರಿಯಿರುತ್ತದೆ ಮತ್ತು ಅದರಲ್ಲಿ ನನಗೆ ಭಾಗಾಂಶದ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆ ಹೂಡುವ ಮೊದಲೇ ದಾನ ಪತ್ರದ ಬಗ್ಗೆ ಮಾಹಿತಿ ಇದ್ದರೂ ಸಹ ನಾನು ಆ ದಾನಪತ್ರದ ಬಗ್ಗೆ ಯಾವುದೇ ಪರಿಹಾರ ಕೇಳಿಲ್ಲ ಎಂದರೆ ಸರಿಯಲ್ಲ.

19. ಸಿ ಷೆಡ್ಯೂಲ್ ಆಸ್ತಿ 9ನೇ ಪ್ರತಿವಾದಿ ಹೆಸರಿಗೆ ಕ್ರಯ ಆಗಿರುತ್ತದೆ ಎಂದರೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಆ ಆಸ್ತಿಯನ್ನು ಒಟ್ಟು ಕುಟುಂಬದಲ್ಲಿದ್ದಾಗ ಖರೀದಿ ಮಾಡಲಾಗಿದೆ ಎಂದು ಹೇಳುತ್ತಾರೆ. ನಾನು ವ್ಯವಸಾಯ ಮಾಡುತ್ತೇನೆ ಮತ್ತು ಲೈನ್ ಮನ್ ಆಗಿ ಬೆಸ್ಕಾಂ ನಲ್ಲಿ ಕೆಲಸ ಮಾಡಿರುತ್ತೇನೆ. ನಾನು 60 ವರ್ಷಗಳವರೆಗೆ ಬೆಸ್ಕಾಂ ನಲ್ಲಿ ಕೆಲಸ ಮಾಡಿರುತ್ತೇನೆ. ನಾನು ಮೈಸೂರು, ಚಾಮರಾಜನಗರ, ದೊಡ್ಡಬಳ್ಳಾಪುರ, ಕುದೂರು, ಶಿಡ್ಲಘಟ್ಟ ಕೆಲಸ ಮಾಡಿರುತ್ತೇನೆ. ನಾನು ಎಲ್ಲೆಲ್ಲಿ ಕೆಲಸ ಮಾಡಿದ್ದೇನೋ ಅಲ್ಲಲ್ಲಿ ನನ್ನ ಕುಟುಂಬ ಸಮೇತನಾಗಿ ಹೋಗುತ್ತಿದ್ದೆ. ನಾನು ನನ್ನ ಸುಮಾರು 22-23 ವಯಸ್ಸಿಗೆ ಬೆಸ್ಕಾಂ ನಲ್ಲಿ ಕೆಲಸಕ್ಕೆ ಸೇರಿರುತ್ತೇನೆ. ನಾನು ನನ್ನ ಸಂಪಾದನೆಯಿಂದ ಜಮೀನು ಮತ್ತು ನಿವೇಶವನ್ನು ಖರೀದಿ ಮಾಡಿಲ್ಲ. ನನ್ನ ಕುಟುಂಬದ ಅಂದರೆ ನನ್ನ ಹೆಂಡತಿ ಮತ್ತು ಮಕ್ಕಳ ಪಡಿತರ ಚೀಟಿ ಮತ್ತು ಚುನಾವಣಾ ಗುರುತಿನ ಚೀಟಿ ಪ್ರತ್ಯೇಕವಾಗಿ ಇರುತ್ತದೆ ಎಂದರೆ ನಿಜ.

20. ನನ್ನ ಮೊದಲನೆ ಮದುವೆ ಜಯಲಕ್ಷ್ಮಮ್ಮರವರ ಜೊತೆ 30 ವರ್ಷಗಳ ಹಿಂದೆ ಆಗಿದ್ದು ಅವರು ತೀರಿಕೊಂಡ ನಂತರ 2ನೇ ಮದುವೆಯನ್ನು ಮಾಡಿಕೊಂಡಿರುತ್ತೇನೆ. ನನ್ನ 2ನೇ ಹೆಂಡತಿಯ ಹೆಸರು

ಜಯಲಕ್ಷ್ಮಮ್ಮ ಆಗಿರುತ್ತದೆ. ನನ್ನ ಹೆಂಡತಿ ಮಕ್ಕಳ ಪಡಿತರ ಚೀಟಿ ನನ್ನ ಜೊತೆ ಒಟ್ಟಿಗೆ ಇರುತ್ತದೆ. ನನ್ನ ಪಡಿತರ ಚೀಟಿಯಲ್ಲಿ ಪ್ರತಿವಾದಿಗಳ ಹೆಸರು ಇರುವುದಿಲ್ಲ ಎಂದರೆ ನಿಜ. ನಾನು ನನ್ನ ಮದುವೆಯಾದ 35 ವರ್ಷಗಳಿಂದ ಪಡಿತರ ಚೀಟಿಯನ್ನು ಇಟ್ಟುಕೊಂಡಿರುತ್ತೇನೆ ಎಂದರೆ ಈಗ ನನ್ನ ಮಕ್ಕಳು ಬದಲಾಯಿಸಿಕೊಂಡಿರುತ್ತಾರೆ ಎಂದು ಹೇಳುತ್ತಾರೆ.

21. ಸಿ ಷೆಡ್ಯೂಲ್ ಆಸ್ತಿ ಮೊದಲು ಕರಿಯಪ್ಪನ ಮಗ ಮರಿಯಪ್ಪನ ಹೆಸರಿನಲ್ಲಿ ಇತ್ತು ಎಂದರೆ ನಿಜ. ಸಿ ಷೆಡ್ಯೂಲ್ ಆಸ್ತಿ ಮೊದಲು ನನ್ನ ತಂದೆ ಅಥವಾ ನನ್ನ ಅಜ್ಜನ ಹೆಸರಿನಲ್ಲಿರಲಿಲ್ಲ ಎಂದರೆ ನಿಜ. ದಿನಾಂಕಃ 31-05-1990 ರಿಂದ ಇಲ್ಲಿಯವರೆಗೆ ಸಿ ಷೆಡ್ಯೂಲ್ ಆಸ್ತಿಯ ಖಾತೆ ಮತ್ತು ಪಹಣಿಗಳು 9 ನೇ ಪ್ರತಿವಾದಿಯ ಹೆಸರಿನಲ್ಲಿವೆ ಎಂದರೆ ನಿಜ. ಸಿ ಷೆಡ್ಯೂಲ್ ಆಸ್ತಿ 9 ನೇ ಪ್ರತಿವಾದಿಯ ಸ್ವಯಾರ್ಜಿತವಾದ ಆಸ್ತಿಯಾಗಿದ್ದು ಅದರಲ್ಲಿ ನನಗೆ ಭಾಗದ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

22. ಡಿ ಷೆಡ್ಯೂಲ್ ಆಸ್ತಿಯನ್ನು ನನ್ನ ತಂದೆ ದಿನಾಂಕಃ 20-04-1982 ರಂದು ಕ್ರಯಪತ್ರದ ಮೂಲಕ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದು ಮಂಜೂರು ಆಗಿರುತ್ತದೆ ಎಂದು ಹೇಳುತ್ತಾರೆ. ಡಿ ಷೆಡ್ಯೂಲ್ ಆಸ್ತಿಯನ್ನು ಪಂಚಾಯ್ತಿ ಮೂಲಕ ಅಳತೆ ಮಾಡಿಕೊಟ್ಟಿರುತ್ತಾರೆ. ಡಿ ಷೆಡ್ಯೂಲ್ ಆಸ್ತಿಯನ್ನು ನನ್ನ ತಂದೆ ದಿನಾಂಕಃ 20-04-1982 ರ ದಾನಪತ್ರದ ಮೂಲಕ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನಗೆ ದಾನ ಪತ್ರದ ವಿಷಯ ಗೊತ್ತಿದ್ದರೂ ಸಹ ನಾನು ಅದನ್ನು ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ. ಬಿ ಮತ್ತು ಡಿ ಷೆಡ್ಯೂಲ್ ಆಸ್ತಿಯ ಖಾತೆ ಮತ್ತು ಪಹಣಿ 40 ವರ್ಷಗಳಿಂದ 1 ಮತ್ತು 4 ನೇ ಪ್ರತಿವಾದಿಗಳ ಹೆಸರಿನಲ್ಲಿರುತ್ತದೆ ಎಂದರೆ ಸರಿಯಲ್ಲ. ಬಿ ಮತ್ತು ಡಿ ಷೆಡ್ಯೂಲ್ ಆಸ್ತಿಗಳ ಖಾತೆ ಮತ್ತು ಪಹಣಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವಾಗ ಅವುಗಳು 1 ಮತ್ತು 4 ನೇ ಪ್ರತಿವಾದಿಗಳ ಹೆಸರಿನಲ್ಲಿತ್ತು ಎಂದರೆ ನಿಜ. ಬಿ ಮತ್ತು ಡಿ ಷೆಡ್ಯೂಲ್ ಆಸ್ತಿಗಳು 1 ಮತ್ತು 4 ನೇ ಪ್ರತಿವಾದಿಗಳ ಹೆಸರಿನಲ್ಲಿ ಬರುತ್ತಿರುವುದು ತಪ್ಪು ಎಂದು ನಾನು ಕಂದಾಯ ಇಲಾಖೆಯಲ್ಲಿ ಪ್ರಶ್ನೆ ಮಾಡಿಲ್ಲ. ದಿನಾಂಕ 20-04-1982 ರಂದು ಕೆಂಪನರಸಯ್ಯನವರು 1 ಮತ್ತು 4 ನೇ ಪ್ರತಿವಾದಿಯ ಹೆಸರಿಗೆ ದಾನಪತ್ರವನ್ನು ಬರೆದುಕೊಡುವಾಗ ನಾನು ಕೂಡ ನೊಂದಣಿ ಕಛೇರಿಗೆ ಬಂದಿದ್ದೆ ಎಂದರೆ ಸರಿಯಲ್ಲ.

23. ಎ ಷೆಡ್ಯೂಲ್ ಆಸ್ತಿಯ ಖಾತೆ ಮತ್ತು ಪಹಣಿಗಳು ಮೊದಲಿಗೆ ನನ್ನ ಅಜ್ಜನ ಹೆಸರಿನಲ್ಲಿದ್ದವು ಎಂದರೆ ನನ್ನ ಅಜ್ಜನ ಹೆಸರಿನಲ್ಲಿ ಇರುವುದನ್ನು ನಾನು ನೋಡಿಲ್ಲ ಆದರೆ ಆ ಆಸ್ತಿಗಳ ಖಾತೆ ಪಹಣಿಗಳು ನನ್ನ ತಂದೆ ಹೆಸರಿನಲ್ಲಿದ್ದವು. ನನ್ನ ತಂದೆಗೆ 3 ಅಥವಾ 4 ವರ್ಷ ವಯಸ್ಸಿನವರಿದ್ದಾಗ ಅವರ ತಂದೆ ಕೆಂಪಯ್ಯರವರು ತೀರಿಕೊಂಡಿದ್ದರು ಎಂದರೆ ಗೊತ್ತಿಲ್ಲ. ನನ್ನ ತಂದೆ ತೀರಿಕೊಂಡಾಗ ಅವರ ವಯಸ್ಸು 90 ವರ್ಷ ಆಗಿತ್ತು ಎಂದರೆ ಅದಕ್ಕಿಂತ ಜಾಸ್ತಿಯಾಗಿತ್ತು ಎಂದು ಹೇಳುತ್ತಾರೆ.

24.  9ನೇ ಪ್ರತಿವಾದಿಗೆ ಮೂರು ಜನ ಗಂಡು ಮಕ್ಕಳು ಅವರು ಬೆಂಗಳೂರಿನಲ್ಲಿ ವ್ಯಾಪಾರ ಮಾಡುತ್ತಾರೆ ಎಂದರೆ ನಿಜ. 1ನೇ ಪ್ರತಿವಾದಿ ದನ ಮತ್ತು ಕುರಿ ಸಾಗಾಣಿಕೆ ಮಾಡುತ್ತಾರೆ ಎಂದರೆ ಸರಿಯಲ್ಲ. 1 ಮತ್ತು 4ನೇ ಪ್ರತಿವಾದಿಗಳು ದಾನಪತ್ರದ ಮೂಲಕ ಬಂದ ಆಸ್ತಿಯನ್ನು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನಿಜ. ನಂತರ ತಮ್ಮ ತಮ್ಮ ಭಾಗದ ಜಮೀನಿನಲ್ಲಿ ಅವರು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ನಿಜ. ಬಿ, ಸಿ ಮತ್ತು ಡಿ ಷೆಡ್ಯೂಲ್ ಆಸ್ತಿಗಳಲ್ಲಿ ನನಗೆ ಭಾಗದ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಬಿ, ಸಿ ಮತ್ತು ಡಿ ಷೆಡ್ಯೂಲ್ ನನ್ನ ಪಿತ್ರಾರ್ಜಿತ ಮತ್ತು ಒಟ್ಟು ಕುಟುಂಬದ ಆಸ್ತಿಗಳು ಅಲ್ಲ ಎಂದರೆ ಸರಿಯಲ್ಲ. 1 ಮತ್ತು 4ನೇ ಪ್ರತಿವಾದಿಗಳ ಆಸ್ತಿಯನ್ನು ಕಬಳಿಸಬೇಕು ಎಂಬ ಉದ್ದೇಶದಿಂದ ನಾನು ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**